# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.

ಸಿ.ಸಿ. ನಂ.20/2022

CW-6/PW-4

| | | |
|---|---|---|
| ಹೆಸರು | : | ನಾಗರಾಜು |
| ತಂದೆ ಹೆಸರು | : | ಕರಿಯಪ್ಪ |
| ವಯಸ್ಸು | : | 46 ವರ್ಷ |
| ವೃತ್ತಿ | : | ಗಾರೆ ಕೆಲಸ |
| ವಾಸ ಸ್ಥಳ | : | ಬಿಡದಿ |
| ದಿನಾಂಕ | : | 14-08-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ-7 ನನಗೆ ಪರಿಚಯ. ಅವರು ತೀರಿಕೊಂಡಿದ್ದಾರೆ. ಆರೋಪಿಯನ್ನು ನಾನು ನೋಡಿದ್ದೇನೆ. ದುರ್ಗೇಶ್‌ರವರ ಮನೆಯ ಮುಂದೆ ಪೊಲೀಸರು ಚೈನು ಕಳ್ಳತನದ ವಿಚಾರವಾಗಿ ಮಹಜರ್ ಮಾಡಿದರು. ಮಹಜರ್ ಕಾಲಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದೆ. ಮಹಜರ್ ಕಾಲಕ್ಕೆ ನಾನಲ್ಲದೇ ವಸಂತ್ ಕುಮಾರ್ ಇದ್ದರು. ಸದರಿ ಮಹಜರನ್ನು ನೋಡಿದರೆ ಗುರುತಿಸಬಲ್ಲೆ. ಹಾಗೆಯೇ  ಪೊಲೀಸರು ಇಂದಿರಾನಗರದ ರೈಲ್ವೆ ನಿಲ್ದಾಣದ ಬಳಿ ಗೋಪಾಲ್‌ರವರ ಮನೆಯ ಮುಂದೆ ಮಹಜರ್ ಮಾಡಿದರು. ಅದನ್ನು ನಿಪಿ-18 ಎಂದು, ನನ್ನ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಿರುತ್ತೇನೆ. ಮಹಜರ್ ಕಾಲಕ್ಕೆ ಪೊಲೀಸರು ಫೋಟೋ ತೆಗೆದರು. ಸದರಿ ಫೋಟೋವನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಫೋಟೋವನ್ನು ಸಿ.ಸಿ.9/2022ರಲ್ಲಿ ನಿಪಿ-9 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯನ್ನು ರಾಮನಗರ ಕಾರಾಗೃಹದಿಂದ ವಿ.ಸಿ ಮುಖಾಂತರ ಹಾಜರುಪಡಿಸಿದ್ದು ಆತನನ್ನು ನೋಡಿ ಗುರುತಿಸಿರುತ್ತೇನೆ.

ಸಿ.ಸಿ. ನಂ.20/2022ರಲ್ಲಿ
CW-6/PW-4

ಪಾಟೀ ಸವಾಲು ಆರೋಪಿ ಪರ ಶ್ರೀ ಕೆ.ಹೆಚ್.ಎಸ್., ವಕೀಲರಿಂದಃ-

ಮಹಜರನ್ನು ಪೊಲೀಸರು ಬರೆದರು. ಅವರ ಹೆಸರು ಗೊತ್ತಿಲ್ಲ. ಮಹಜರ್ ಗೆ ಬರಬೇಕೆಂದು ಪೊಲೀಸರು ನೋಟಿಸ್ ಕೊಟ್ಟಿರಲಿಲ್ಲ, ನಾನು ಸ್ಥಳದಲ್ಲಿದ್ದೆ. ಮಹಜರನ್ನು ಬೆಳಗ್ಗೆ 10.30 ರಿಂದ 12.00 ಗಂಟೆಯವರೆಗೆ ಮಾಡಿದರು. ಮಹಜರ್ ಕಾಲಕ್ಕೆ ಸುಮಾರು ಜನ ಹಾಜರಿದ್ದರು, ಅವರ ಹೆಸರು ಜ್ಞಾಪಕವಿಲ್ಲ. ನಾನು ಮಹಜರ್ ಗೆ ಸ್ಥಳದಲ್ಲಿ ಸಹಿ ಮಾಡಿಲ್ಲ, ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.